ಪ್ರತಿಬಿಂಬ
PRATIBIMBA – Multidisciplinary Kannada Research Journal of IIMRD
ISSN: 2582-2284
Vol-2 Issue 2, Sep-Oct 2020, 164-171
©IIMRD, Mysuru
IIMRD JOURNALS
www.iimrd.com

# ತಮಿಳು ಭಾಷೆಯ ಪ್ರಾಚೀನ ಮಹಾಕಾವ್ಯಗಳು

ಲೀಲಾವತಿ ಜಿ[1]

## ಪೀಠಿಕೆ

ಮಹಾಕಾವ್ಯವನ್ನು ಆಂಗ್ಲ ಭಾಷೆಯಲ್ಲಿ epic ಎಂದು ಕರೆಯಲಾಗುತ್ತದೆ. ಯಾವುದೇ ಪ್ರಾಚೀನ ಇತಿಹಾಸವಿರುವ ಸಾಹಿತ್ಯ ಚರಿತ್ರೆಯಲ್ಲಿ ಮಹಾಕಾವ್ಯ, ಪುರಾಣ ಗ್ರಂಥಗಳನ್ನು Classical Literature (ಶಾಸ್ತ್ರೀಯ ಸಾಹಿತ್ಯ) ಎಂದು ಕರೆಯಲಾಗುತ್ತದೆ. ಶಾಸ್ತ್ರೀಯ ಸಾಹಿತ್ಯಕ್ಕೆ ತನ್ನದೇ ಆದ ಪ್ರತ್ಯೇಕ ಸ್ಥಾನಮಾನವಿದೆ. ಗ್ರೀಕ್–ಲ್ಯಾಟಿನ್ ಭಾಷೆಯಲ್ಲಿ ಪ್ರಾಚೀನ ಕಾವ್ಯ, ಕ್ರಮಾವಳಿ ಕಾವ್ಯ (Secondary Epic), ವೀರ ಕಾವ್ಯ ಎಂದು ಹಲವು ಬಗೆಯಲ್ಲಿ ಗುರುತಿಸಲಾಗುತ್ತದೆ. ಉತ್ತರ ಭಾರತದ ಭಾಷೆಗಳಲ್ಲಿ ಇತಿಹಾಸ, ಮಹಾಕಾವ್ಯ, ಕಾವ್ಯ, ಚಂಪೂ ಕಾವ್ಯ, ಸಂದೇಶ ಕಾವ್ಯ, ಖಂಡ ಕಾವ್ಯಗಳೆಂದು ಹೆಸರಿಸಲಾಗುತ್ತದೆ. ಅದೇ ರೀತಿ ದ್ರಾವಿಡ ಭಾಷೆಗಳಾದ ತಮಿಳು, ಕನ್ನಡ, ತೆಲುಗು, ಮಲೆಯಾಳಂ ಭಾಷೆಗಳಲ್ಲೂ ಶಾಸ್ತ್ರ ಸಾಹಿತ್ಯ ಇರುವುದನ್ನು ಕಾಣಬಹುದು. ಮಹಾಕಾವ್ಯವನ್ನು epicನ ಸಮಾನಾಂತರವಾಗಿ ತಮಿಳಿನಲ್ಲಿ 'ಕಾಪ್ಪಿಯಂ' ಎಂದು ಕರೆಯುತ್ತಾರೆ. ಈ ಕಾಪ್ಪಿಯಂನ್ನು ದೊಡ್ಡ ಮಹಾಕಾವ್ಯ, ಚಿಕ್ಕ ಮಹಾಕಾವ್ಯ, ಇತಿಹಾಸ ಕಾವ್ಯ, ಭಾಷಾಂತರ ಕಾವ್ಯ, ಧಾರ್ಮಿಕ ಕಾವ್ಯ, ಪುರಾಣ ಕಾವ್ಯ ಮತ್ತು ಪ್ರಸ್ತುತ ಕಾಲದ ಕಾವ್ಯ ಎಂದು ವಿಂಗಡಿಸುತ್ತಾರೆ. ಸಿಲಪ್ಪಾದಿಗಾರಂ, ಮಣಿಮೇಗಲೈ, ಸಿವಗಸಿಂತಾಮಣಿ, ವಳೈಯಾಪತಿ ಮತ್ತು ಕುಂಡಲಕೇಶಿಯನ್ನು ಐದು ದೊಡ್ಡ ಮಹಾಕಾವ್ಯಗಳು (ಐಂಪೆರುಂಗ್ ಕಾಪ್ಪಿಯಂ) ಎಂದೂ ಸೂಳಾಮಣಿ, ಯಶೋಧರ ಕಾವ್ಯ, ಉದಯಣ ಕುಮಾರ ಕಾವ್ಯ, ನಾಗಕುಮಾರ ಕಾವ್ಯ ಮತ್ತು ನೀಲಕೇಶಿಯನ್ನು ಐದು ಚಿಕ್ಕ ಮಹಾಕಾವ್ಯ (ಐಂಚಿರು ಕಾಪ್ಪಿಯಂ)ಗಳೆಂದು ಕರೆಯುತ್ತಾರೆ. ಐದು ಮಹಾಕಾವ್ಯದ ಕುರಿತು ಮೊದಲು ತಿಳಿಸಿದವರು ಮಯಿಲೈನಾದರ್. ಐದು ಮಹಾಕಾವ್ಯಗಳ ಹೆಸರುಗಳನ್ನು ತಿಳಿಸಿದವರು ಕಂದಪ್ಪದೇಸಿಗರ್. ಪ್ರಸ್ತುತ ಲೇಖನದಲ್ಲಿ ತಮಿಳಿನಲ್ಲಿ ಕಂಡುಬರುವ ಐದು ಮಹಾ ಕಾವ್ಯಗಳ ಕುರಿತ ವಸ್ತು, ವಿಷಯಗಳ ಪರಿಚಯವನ್ನು ವಿಶ್ಲೇಷಿಸಲಾಗಿದೆ.

## ಮಹಾಕಾವ್ಯಗಳ ಲಕ್ಷಣಗಳು

- ಮಹಾಕಾವ್ಯವು ಶುಭಾಷಯ ಕೋರುವುದು, ದೇವರನ್ನು ಸ್ಮರಿಸುವುದು, ಭವಿಷ್ಯತ್ತಿನ ಸಂದೇಶ ಈ ಮೂರು ಅಂಶಗಳು ಆರಂಭದಲ್ಲಿ ಕಾಣಿಸುತ್ತವೆ. ಒಂದು ಅಥವಾ ಎರಡು ಅಂಶಗಳಿಂದಲೂ ಕಾವ್ಯ ಆರಂಭಿಸಬಹುದು.

[1] *ಸಂಶೋಧಕರು, ಭಾಷಾಂತರ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.*

- ನೈತಿಕ ಮೌಲ್ಯ, ವಸ್ತು, ಆನಂದ, ಮನೆ ಮುಂತಾದ ನಾಲ್ಕು ಬಗೆಯ ವಸ್ತುಗಳಿಗೂ ಉಪಯೋಗವಾಗುವಂತೆ ಕೂಡಿರುತ್ತದೆ.
- ಕಾವ್ಯದ ಕಥಾನಾಯಕನು ಹೋಲಿಸಲಾಗದ ಪಾರದರ್ಶಕತೆಯುಳ್ಳವನಾಗಿರಬೇಕು.
- ಬೆಟ್ಟ, ಸಮುದ್ರ, ನಗರ, ಆರು ಋತುಗಳು, ಸೂರ್ಯನ ಉದಯ, ಚಂದ್ರನ ಉದಯ, ಮುಂತಾದವುಗಳ ಜೊತೆಗೆ ಸೂರ್ಯಾಸ್ತ, ಬೆಳದಿಂಗಳು, ತಂಗಾಳಿ, ಕುದುರೆ, ಆನೆ, ಧ್ವಜ ಮತ್ತು ಕಹಳೆಯ ವರ್ಣನೆ ಇರಬೇಕು.
- ವಿವಾಹ, ತೋಟಗಳಲ್ಲಿ ವಿಹರಿಸುವುದು, ನೀರಿನಲ್ಲಿ ಆಟವಾಡುವಿಕೆ, ಮದುಪಾನ ಮಾಡಿವುದು, ಮಕ್ಕಳನ್ನು ಹೆರುವುದು, ಪ್ರಣಯ ಕಲಹ, ಸಂಭೋಗದಿಂದ ಸಂತೋಷಪಡುವುದು ಮುಂತಾದ ಅಂಶಗಳನ್ನು ಒಳಗೊಂಡಿರಬೇಕು.
- ಕಿರೀಟಧಾರಣೆ ಮಾಡುವುದು, ರಾಜ್ಯದ ರೀತಿ–ನೀತಿಗಳು, ಮಂತ್ರಿಗಳೊಡನೆ ಆಲೋಚನೆ ನಡೆಸುವುದು, ರಾಯಭಾರ (ಧೂತನನ್ನು) ಕಳುಹಿಸುವುದು, ಯುದ್ಧಕ್ಕೆ ಹೋಗುವುದು, ಯುದ್ಧದ ಸಂದರ್ಭ, ವಿಜಯಶಾಲಿಯಾಗುವುದು ಮುಂತಾದ ಸಂದರ್ಭಗಳಿಂದ ಕೂಡಿರಬೇಕು.
- ಕಥೆಯ ಆರಂಭ, ಬೆಳವಣಿಗೆ, ಮುಕ್ತಾಯ ಅಂಶಗಳು ಒಂದಕ್ಕೊಂದು ಸಾಲಾಗಿರಬೇಕು.
- ಕಾವ್ಯದ ರಚನೆಯಲ್ಲಿ ಅಧ್ಯಾಯ (ಸರ್ಗಗಳಲ್ಲಿ) ಸರಪಳಿ, ಪರಿಚ್ಛೇದ ಎಂಬ ಹೆಸರಿನಲ್ಲಿ ಒಂದನ್ನು ಒಂದು ಅನುಸರಿಸಿರಬೇಕು.
- ಎಲ್ಲಾ ಬಗೆಯ ರುಚಿಗಳನ್ನು ಭಾವ–ಮನಸ್ಸು ಉಲ್ಲಾಸ ಪಡುವಂತೆ ಕೇಳುಗರ ಇಷ್ಟಪಡುವ ವರ್ಣರಂಜಿತವಾಗಿ ರಸಪರಿಪೋಷಕವಾಗಿ ನಿರೂಪಿಸಬೇಕು.
- ವಿದ್ವಾಂಸರಿಂದ ಹೊಗಳುವಂತಿರಬೇಕು. ಇವುಗಳನ್ನು ಬಿಟ್ಟು ಬೇರೆ ಕೆಲವು ವಸ್ತುಗಳಲ್ಲಿ ಚಿಕ್ಕ ಕೊರತೆ ಕಾಣಿಸಬಹುದು. ಇದು ಮಹಾಕಾವ್ಯಗಳ ಕುರಿತ ತಮಿಳಿನ ಲಕ್ಷಣಗಳು.

**ಸಿಲಪ್ಪಾದಿಗಾರಂ**

ಸಿಲಂಬು (ಕಾಲು ಕಡ್ಗ) + ಅಧಿಕಾರಂ (ಅಧಿಕಾರ) = ಸಿಲಪ್ಪಾದಿಗಾರಂ ಕನ್ನಗಿಯ ಕಾಲು ಕಡ್ಗವನ್ನು ವಿವರಿಸುವ ಕಥೆಯೇ ಸಿಲಪ್ಪಾದಿಕಾರ. ಇಳಂಗೋ ಅಡಿಗಳ್‌ರವರಿಂದ ರಚಿತವಾದ ಈ ಕಾವ್ಯ ಪುಗಾರ್ ಕಾಂಡ, ಮದುರೈಕಾಂಡ, ವಂಜಿಕ್‌ಕಾಂಡಂ ಎಂಬ ಮೂರು ಕಾಂಡಗಳಿದ್ದು, ಮೂರು ಕಾಂಡಗಳಲ್ಲಿ ಒಟ್ಟು ಮೂವತ್ತು ಕಥೆಗಳನ್ನು ಹೊಂದಿದೆ. ಪುಗಾರ್ ಕಾಂಡದಲ್ಲಿ 10 ಕಥೆ, ಮಧುರೈ ಕಾಂಡದಲ್ಲಿ 13 ಕಥೆ, ವಂಜಿಕ್ ಕಾಂಡದಲ್ಲಿ 7 ಕಥೆಗಳಿವೆ. ಚೋಳ, ಪಾಂಡ್ಯ ಮತ್ತು ಚೇರ ರಾಜರ ನಾಡಿನಲ್ಲಿ ಕಥೆಯನ್ನು ನಡೆಸಿಕೊಂಡು ಹೋಗುತ್ತಾರೆ. ಇಳಂಗೋ ಅಡಿಗಳ್. ಇದನ್ನು ಜೈನ ಕಾವ್ಯವೆಂದು ಕರೆಯಲಾಗಿದೆ.

ಚೋಳ ನಾಡಿನ ಕಾವೇರಿಪೂಂಪಟ್ಟಿಣದ ಮಾನಾಯ್‌ಕನ್ ಎಂಬ ದೊಡ್ಡ ವ್ಯಾಪಾರಿಯ ಮಗಳಾದ ಕಣ್ಣಗಿಗೂ ಅದೇ ನಗರದ ಶ್ರೀಮಂತನಾದ ಮಾಸಾತ್ತುವಾನ್ ಮಗನಾದ ಕೋವಲನ್‌ನಿಗೂ

ವಿವಾಹವಾಗುತ್ತದೆ. ಸ್ವಲ್ಪ ದಿನಗಳು ನವ ದಂಪತಿಗಳು ಸಂತೋಷವಾಗಿರುತ್ತಾರೆ. ಇದರ ನಡುವೆ ಕೋವಲನ್‌ನು ವೀಣೆ ನುಡಿಸುವುದು, ಹಾಡು, ಸಂಗೀತ ಮತ್ತು ಕುಣಿತಗಳಲ್ಲಿ ಹೆಚ್ಚು ಆಸಕ್ತಿಯ ದುಂಬಿಯಾಗಿದ್ದ, ಪೂಂಬುಕಾರ್‌ನಲ್ಲಿ ನೃತ್ಯ ಪರಿಣಿತಳು ಕಲೆಯ ಮದುವನ್ನು ಉಣಿಸುವ ಹೂವಾದ ಮಾದವಿಯ ಸೌಂದರ್ಯಕ್ಕೆ ಮನ ಸೋಲುತ್ತಾನೆ. ಮಾದವಿಯ ಮನೆಯ ಕೆಲಸದವಳು ಅಂಗಡಿ ಬೀದಿಯಲ್ಲಿ ಒಂದು ಮಾಲೆಯನ್ನಿಟ್ಟು ವ್ಯಾಪಾರ ಮಾಡುತ್ತಾಳೆ. ಮತ್ತು ಅದನ್ನು ಕೊಂಡುಕೊಂಡವರಿಗೆ ಮಾಧವಿಯನ್ನು ಹೊಂದಬಹುದು ಎಂದು ತಿಳಿಸುತ್ತಾಳೆ. ಆ ಮಾಲೆಯನ್ನು ಕೋವಲನ್ ತೆಗೆದುಕೊಂಡು ಮಾಧವಿಯನ್ನು ಪಡೆಯುತ್ತಾನೆ. ಕಾರಣ ಕಲೆಯು, ರುಚಿಯು ಬೆಸೆಯುತ್ತದೆ. ಕಾಲ ಬೆಳೆಯುತ್ತದೆ. ಕೋವಲನ್ ಮಾಧವಿಯ ಮನೆಯಲ್ಲಿಯೇ ಜೀವಿಸುತ್ತಾನೆ. ಇದರಿಂದ ಅವನ ಸಂಪತ್ತು ಕರಗುತ್ತದೆ.

ವಿಧಿಯ ಕಾರಣದಿಂದ ಪ್ರೇಮಿಗಳು ದೂರ ಆಗುತ್ತಾರೆ. ಕೊನೆಗೆ ಹೆಂಡತಿ ಕಣ್ಣಗಿಯ ಜೊತೆಗೆ ಬಂದು ಸೇರುತ್ತಾನೆ. ಕಳೆದುಕೊಂಡ ಸಂಪತ್ತನ್ನು ಗಳಿಸಲು ಪ್ರಯತ್ನಿಸುತ್ತಾನೆ. ಮೂಲಧನವನ್ನಾಗಿ ಕಣ್ಣಗಿಯ ಒಂದು ಕಾಲು ಕಡಗವನ್ನು ತೆಗೆದುಕೊಂಡು ಅವಳನ್ನು ಕರೆದುಕೊಂಡು ರಾತ್ರಿಯಲ್ಲಿ ಮದುರೈಗೆ ಹೊರಡುತ್ತಾನೆ. ವಿಧಿಯಾಟ ಮುಂದುವರಿಯುತ್ತದೆ. ಮಾದರಿ ಎಂಬ ಆರ್ಯ ಕುಲದ ಮಹಿಳೆಯ ಹತ್ತಿರ ಕಣ್ಣಿಗೆಯನ್ನು ಸುರಕ್ಷಿತವಾಗಿಟ್ಟು ಕಾಲು ಕಡುಗವನ್ನು ಮಾರಲು ನಗರಕ್ಕೆ ಹೋಗುತ್ತಾನೆ. ನಗರದಲ್ಲಿ ಕಳ್ಳನ ಬಳಿ ಕಾಲು ಕಡಗವನ್ನು ತೋರಿಸುತ್ತಾನೆ. ಆ ಕಳ್ಳನು ರಾಣಿಯ ಕಾಲು ಕಡಗವನ್ನು ದೋಚಿದವನು. ಅದನ್ನು ಮರೆಮಾಚಲು ಇದೇ ಸರಿಯಾದ ಸಮಯವೆಂದು ರಾಜನನ್ನು ಕಂಡು ರಾಣಿಯ ಕಾಲು ಕಡಗವನ್ನು ಕೋವಲನ್ ದೋಚಿದ್ದಾನೆಂದು ದೂರುತ್ತಾನೆ. ರಾಜನು ಯಾವುದೇ ವಿಚಾರಣೆ ನಡೆಸದೇ ಕೋವಲನ್‌ನನ್ನು ರಾಜನ ಆಜ್ಞೆಯಂತೆ ಕೊಲೆ ಮಾಡಲಾಗುತ್ತದೆ. ವಿಷಯ ತಿಳಿದ ಕಣ್ಣಗಿ ಪಾಂಡ್ಯನ ಆಸ್ಥಾನಕ್ಕೆ ಹೋಗಿ ನ್ಯಾಯ ಕೇಳುತ್ತಾಳೆ. ಪಾಂಡ್ಯರಾಜನ ಹೆಂಡತಿಯ ಕಾಲಿನ ಖಡ್ಗ ಮುತ್ತಿನಿಂದ ಕೂಡಿದ್ದರೆ ಕಣ್ಣಗಿಯ ಕಾಲಿನ ಖಡ್ಗ ಮಾಣಿಕ್ಯದಿಂದ ಕೂಡಿರುತ್ತದೆ. ಕೊನೆಗೆ ಸತ್ಯ ತಿಳಿದ ಪಾಂಡ್ಯ ರಾಜನು ಆಸ್ಥಾನದಿಂದ ಕೆಳಗೆ ಬಿದ್ದು ಜೀವ ಬಿಡುತ್ತಾನೆ. ಅವನನ್ನು ಹಿಂಬಾಲಿಸಿ ರಾಣಿಯು ಸಾಯುತ್ತಾಳೆ. ಕಣ್ಣಗಿ ಮಧುರೈಯನ್ನು ಸುಡುತ್ತಾಳೆ. ನಂತರ ಚೇರ ನಾಡನ್ನು ಸೇರಿದ ಕಣ್ಣಗಿ ಒಂದು ಮರದ ನೆರಳಲ್ಲಿ ನಿಲ್ಲುತ್ತಾಳೆ. ದೇವತಾಪುರುಷರೊಂದಿಗೆ ತೇರಿನಲ್ಲಿ ಬಂದ ಕೋವಲನ್, ಕಣ್ಣಗಿಯ ಕೈ ಹಿಡಿದು ಕರೆದುಕೊಂಡು ಹೋಗುತ್ತಾನೆ. ಇದನ್ನು ಕಂಡ ಕುಂಡ್ರಕ್ ಕುರವರ್‌ರು ಚೇರ ಅರಸನಾದ ಸೆಂಗುಟ್ಟವನ್‌ನ ಬಳಿ ಹೇಳುತ್ತಾರೆ. ಸೆಂಗುಟ್ಟುವನ್ ಕಣ್ಣಗಿಗೆ ವಂಜಿಮಹಾನಗರದಲ್ಲಿ ದೇವಸ್ಥಾನವನ್ನು ಕಟ್ಟಿಸುತ್ತಾನೆ.

ಈ ಮಹಾಕಾವ್ಯವು ಪ್ರಮುಖವಾಗಿ ಮೂರು ಸತ್ಯಗಳನ್ನು ತಿಳಿಸುತ್ತದೆ.

'ಅರಸಿಯಲ್ ಪಿಳ್ಳೈತ್ತೋರುಕ್ಕು ಅರಂ ಕೂಟ್ರಾಗುಂ' ರಾಜಕೀಯದಲ್ಲಿ ತಪ್ಪು ಮಾಡಿದವರಿಗೆ ದೇವರು ಯಮನಾಗುತ್ತಾನೆ. 'ಊಳ್ವಿನ್ನೈ ಉರುತ್ತು ವಂದು ಊಟ್ಟುಂ' ಕರ್ಮದ ಫಲವನ್ನು ಎಲ್ಲರೂ ಅನುಭವಿಸಲೇಬೇಕು ಮತ್ತು 'ಉರೈಸಾಲ್ ಪತ್ತಿಣಿಯ್ಯೆ ಉಯರ್‌ಂದೋರ್ ಏತ್ತುವಾರ್' ಶೀಲವಂತ ಪತಿವ್ರತೆಯವರನ್ನು ದೊಡ್ಡವರು ಹೊಗಳುತ್ತಾರೆ.

**ಮಣಿಮೇಗಲೈ**

ಕೋವಲನ್ ಮತ್ತು ಮಾದವಿಗೆ ಹುಟ್ಟಿದ ಮಗಳಾದ ಮಣಿಮೇಗಲೈಯ ಚರಿತ್ರೆಯನ್ನು ತಿಳಿಸುತ್ತದೆ. ಕೋಲವನ್‌ನ ಮನೆದೇವತೆಯು ಮಣಿಮೇಗಲಾ ಆಗಿದ್ದರಿಂದ ಕಥಾನಾಯಕಿಗೆ ಮಣಿಮೇಗಲೈ ಎಂದು

ಹೆಸರಿಡಲಾಯಿತು. ಮಣಿಮೇಗಲೈಯ ಕಾವ್ಯವನ್ನು ರಚಿಸಿದವರು ಸೀತ್ತಲೈಚ್ ಸಾತ್ತನಾರ್, 30 ಕಥೆಗಳಿರುವ ಈ ಕಾವ್ಯ 4755 ಸಾಲುಗಳನ್ನು ಒಳಗೊಂಡಿದೆ. ಬೌದ್ಧ ಧರ್ಮವನ್ನು ಮೂಲವಾಗಿಸಿ, ಬೌದ್ಧ ಧರ್ಮದ ಪ್ರಚಾರ ಮತ್ತು ಸಾಮಾಜಿಕ ಬದಲಾವಣೆಯ ಉದ್ದೇಶಗಳನ್ನಿಟ್ಟುಕೊಂಡ ಕಾವ್ಯವಾಗಿದೆ. ಇದನ್ನು ಕ್ರಿ.ಪೂ.5ನೇ ಶತಮಾನದ ಕಾವ್ಯವೆಂದು ಗುರುತಿಸಲಾಗಿದೆ. ಸಿಲಪ್ಪಾದಿಗಾರಂನಂತೆ ಈ ಕಾವ್ಯವು ಸಹ ಸ್ತ್ರೀಯರು ಧರಿಸಿಕೊಳ್ಳುವ ಆಭರಣವನ್ನು ಸೂಚಿಸುತ್ತದೆ. ಮೇಗಲೈ ಎಂದರೆ ಸ್ತ್ರೀಯರು ಸೊಂಟದಲ್ಲಿ ಹಾಕಿಕೊಳ್ಳುವ ಒಂದು ಆಭರಣವಾಗಿದ್ದು, ಮಣಿ(ಮಾಣಿಕ್ಯ)ದಿಂದ ಮಾಡಿದ್ದರಿಂದ ಮಣಿಮೇಗಲೈ ಆಗುತ್ತಿದೆ.

ಕಾವ್ಯದ ಕಥಾನಾಯಕಿಯಾದ ಮಣಿಮೇಗಲೈ ಕೋವಲನ್‌ಗೂ ಮಾಧವಿಗೂ ಹುಟ್ಟಿದ ಮಗಳು. ಕೋವಲನ್ ಕೊಲೆಯಾದ ನಂತರ ಮಾದವಿ ಸಂಸಾರಿಕ (ಇಹಲೋಕ) ಜೀವನ ತೊರೆದು ಅರವಣ ಅಡಿಗಳ್ ಎಂಬ ಭಿಕ್ಷುವಿನ ಬಳಿ ಬೌದ್ಧ ಧರ್ಮದ ದೀಕ್ಷೆ ತೆಗೆದುಕೊಳ್ಳುತ್ತಾಳೆ. ತನ್ನ ಮಗಳು ಮಣಿಮೇಗಲೈಗೂ ದೀಕ್ಷೆಯನ್ನು ಕೊಡಿಸುತ್ತಾಳೆ. ಆ ಸಂದರ್ಭದಲ್ಲೇ ಪುಗಾರ್ ನಗರದಲ್ಲಿ ಇಂದ್ರ ಸಭೆ (ಜಾತ್ರೆ) ನಡೆಯುತ್ತದೆ. ಆ ಜಾತ್ರೆಯಲ್ಲಿ ಮಾದವಿಯು ಮಣಿಮೇಗಲೈ ಇಬ್ಬರೂ ನೃತ್ಯ ಮಾಡಬೇಕಾಗಿತ್ತು. ಆದರೆ ಕಲಾ ಜೀವನವನ್ನು ತ್ಯಜಿಸಿದ್ದರಿಂದ ಮಾದವಿ ಮತ್ತು ಮಣಿಮೇಗಲೈ ಈ ಜಾತ್ರೆಯಲ್ಲಿ ಬಾಗಿಯಾಗಿರಲಿಲ್ಲ. ಇದರಿಂದ ಮಾದವಿಯ ತಾಯಿ ಚಿತ್ರಭಾರತಿ, ವಯಂದಮಾಲೈ ಎಂಬುವಳನ್ನು ಕಳುಹಿಸಿ ಜಾತ್ರೆಯಲ್ಲಿ ಮಾದವಿಗೆ ಮತ್ತು ಅವಳ ಮಗಳು ಮಣಿಮೇಗಳೈಯನ್ನು ಕುಣಿಯಲು ಬರುವಂತೆ ಹೇಳಿ ಕಳಿಹಿಸುತ್ತಾಳೆ. ಇದಕ್ಕೆ ಮಾಧವಿ ಮಣಿಮೇಗಲೈಯು ಶೀಲವಂತೆ ಕಣ್ಣಗಿಯ ಮಗಳೆಂದು ಅವಳು ಕೆಟ್ಟ ಕೆಲಸಗಳಲ್ಲಿ ಭಾಗಿಯಾಗುವುದಿಲ್ಲ ಎಂದು ತಿಳಿಸುತ್ತಾಳೆ. ನಂತರ ಮಣಿಮೇಗಲೈಗೆ ಕಣ್ಣಗಿ ಮತ್ತು ಕೋವಲನ್‌ರ ಕತೆ ಹೇಳುತ್ತಾಳೆ. ಕೋವಲನ್ ಯಾವುದೇ ತಪ್ಪು ಮಾಡದೆ ಕೊಲೆಯಾದ ವಿಷಯವನ್ನು ತಿಳಿದು ಮಣಿಮೇಗಲೈ ದುಃಖಿಸುತ್ತಾಳೆ, ಆಗ ಅವಳ ಕಣ್ಣೀರ ಹನಿ ಬುದ್ಧರಿಗೆ ತೊಡಿಸುವ ಹೂ ಮಾಲೆಯಲ್ಲಿ ಬಿದ್ದು ಪವಿತ್ರತೆ ಕಳೆದುಕೊಳ್ಳುತ್ತದೆ. ಆಗ ಮಣಿಮೇಗಲೈ ಮತ್ತು ಅವಳ ಗೆಳತಿ ಸುದಮತಿ ಹೂವುಗಳನ್ನು ತರಲು ಉವವಣಂ ಎಂಬ ತೋಟಕ್ಕೆ ಹೋಗುತ್ತಾರೆ.

ಉವವಣಂದ ಪ್ರಾಕೃತಿಕ ಸೌಂದರ್ಯಕ್ಕೆ ಮನಸೋತ ಮಣಿಮೇಗಲೈ, ಚೋಳರ ಯುವರಾಜ ಉದಯಕುಮಾರನ್‌ನ ತೇರಿನ ರಥದ ಶಬ್ದ ಕೇಳಿ ಅಂಜಿ, ಅಲ್ಲೇ ಇದ್ದ ಪಳಿಕ್ಕರೈ ಮಂಟಪದಲ್ಲಿ ಅವಿತುಕೊಳ್ಳುತ್ತಾಳೆ. ಮಣಿಮೇಗಲೈಯ ಮೇಲೆ ಮೋಹಗೊಂಡ ಉದಯಕುಮಾರ ಅವಳನ್ನು ಪಡೆಯಲು ಗೆಳತಿ ಸುದಮತಿಯ ಬಳಿ ವಿಚಾರಿಸುತ್ತಾನೆ. ಆದರೆ ಸುದಮತಿ 'ಮಣಿಮೇಗಲೈ ತಪಸ್ವಿನಿ ಕಾಮವನ್ನು ತೊರೆದವಳು'. ಆದರೆ ಉದಯಕುಮಾರನ್ ಚಿತ್ರಾವತಿಯಿಂದ ಮಣಿಮೇಗಲೈಯನ್ನು ಪಡೆಯುತ್ತೇನೆಂದು ತೆರಳುತ್ತಾನೆ. ಮಂಟಪದಿಂದ ಹೊರಬಂದ ಮಣಿಮೇಗಲೈಯನ್ನು ಮಣಿಮೇಗಲಾ ದೇವತೆಯು ಮಾಯ ಮಾಡಿ ಮಣಿಪಲ್ಲವ ದ್ವೀಪದಲ್ಲಿ ಬಿಡುತ್ತದೆ. ಮುಂದುವರಿದು ಮಣಿಮೇಗಲಾ ದೇವತೆಯು ಸುದಮದಿಗೆ ಮಣಿಮೇಗಲಾ ಮಣಿಪಲ್ಲವ ದ್ವೀಪದಲ್ಲಿದ್ದಾಳೆ. ಅಲ್ಲಿ ತನ್ನ ಪೂರ್ವ ಜನ್ಮ ರಹಸ್ಯ ತಿಳಿದು ಏಳು ದಿನಗಳಲ್ಲಿ ಮರಳಿ ಬರುತ್ತಾಳೆ ಎಂದು ಹೇಳುತ್ತದೆ. ಮಣಿಪಲ್ಲವದಲ್ಲಿ ಬುದ್ಧ ಪೀಠಿಕಾದಿಂದ ತನ್ನ ಪೂರ್ವಜನ್ಮವನ್ನು ತಿಳಿದುಕೊಳ್ಳುತ್ತಾಳೆ. ನಂತರ ತಿಯ ತಿಲಗೈ ಎಂಬ ದೇವತೆಯ ಸಹಾಯದಿಂದ ಅಮುದ ಸುರಪಿ (ಅಕ್ಷಯ ಪಾತ್ರೆ)ಯನ್ನು ಪಡೆದು ಪೂಂಬುಕಾರ್‌ಗೆ ಬಂದು ಸೇರುತ್ತಾಳೆ.

ಪೂಂಬುಕಾರ್‌ನಲ್ಲಿ ಮಣಿಮೇಗಲೈ ಧರ್ಮ ಪ್ರಚಾರ, ಉಪದೇಶ ಮತ್ತು ಅಮುದ ಸುರಪಿಯಿಂದ ಜನರ ಹಸಿವನ್ನು ನೀಗಿಸುತ್ತಾಳೆ. ಈ ಸ್ಥಿತಿಯಲ್ಲಿ ಉದಯಕುಮಾರ್‌ನಿಂದ ತಪ್ಪಿಸಿಕೊಳ್ಳಲು ಕಾಯಸಂಡಿಗೈ ಎಂಬ ಸ್ತ್ರೀಯ ರೂಪ ಧರಿಸುತ್ತಾಳೆ. ಇದನ್ನು ತಿಳಿದು ಉದಯಕುಮಾರ್ ಕಾಯಸಂಡಿಗೈಯನ್ನು ಪಡೆಯುವ ಯೋಚನೆ ಮಾಡಿ ಅವಳು ಇರುವ ಸ್ಥಳಕ್ಕೆ ಬರುತ್ತಾನೆ. ಕಾಯಸಂಡಿಗೈಯ ರೂಪದಲ್ಲಿ ಮಣಿಮೇಗಲೈ ಇದ್ದದ್ದು ತಿಳಿಯದ ಕಾಯಸಂಡಿಗೈಳ ಗಂಡ ತನ್ನ ಹೆಂಡತಿಯನ್ನು ನೋಡಲು ಉದಯಕುಮಾರ್ ಬಂದಿದ್ದಾನೆಂದು ತಿಳಿದು ಅವನೊಂದಿಗೆ ಜಗಳವಾಡಿ, ಉದಯಕುಮಾರ್‌ನನ್ನು ಕೊಲ್ಲುತ್ತಾನೆ. ಉದಯಕುಮಾರ್‌ನ ತಾಯಿ ಮಣಿಮೇಗಲೈಯು ಉದಯಕುಮಾರ್‌ನನ್ನು ಕೊಲ್ಲಿಸಿದ್ದಾಳೆಂದು ಅವಳನ್ನು ಸೆರೆಮನೆಯಲ್ಲಿ ಇಡುತ್ತಾಳೆ. ಆದರೆ ಮಣಿಮೇಗಲೈಯ ದೈವಶಕ್ತಿಯ ಕಾರ್ಯಗಳಿಂದ ಬಿಡುಗಡೆಯಾಗುತ್ತಾಳೆ. ನಂತರ ವಂಜಿ ನಗರಕ್ಕೆ ತೆರಳಿ ಅಲ್ಲಿ ಅರವಣ ಅಡಿಯವರ ದರ್ಶನ ಪಡೆದು ಬುದ್ಧಂ ಶರಣಂ ಗಚ್ಛಾಮಿ, ಧರ್ಮಂ ಶರಣಂ ಗಚ್ಛಾಮಿ, ಸಂಗಂ ಶರಣಂ ಗಚ್ಛಾಮಿ ಎಂದು ಧ್ಯಾನ ಮಾಡುತ್ತಾ ಜೀವಿಸಿದಳು ಎನ್ನುತ್ತಾ ಮಣಿಮೇಗಲೈ ಕಾವ್ಯ ಮುಕ್ತಾಯವಾಗುತ್ತದೆ.

**ಸೀವಗ ಸಿಂದಾಮಣಿ**

ಸೀವಗ ಸಿಂತಾಮಣಿಯು ಉತ್ತರ ಭಾರತದ ಭಾಷೆಯಲ್ಲಿರುವ ಚಿತ್ತ ಚೂಡಾಮಣಿ, ಸತ್ಯ ಚಿಂತಾಮಣಿ, ಸ್ತ್ರೀ ಪುರಾಣಂ ಮುಂತಾದ ಕೃತಿಗಳಲ್ಲಿರುವ ಕಥೆಗಳ ಭಾಷಾಂತರವಾಗಿದೆ. ಸಿವಗ ಚಿಂತಾಮಣಿಯ ಲೇಖಕರು ತಿರುತ್ತಕ್ಕ ದೇವರ್ ಇವರು ಜೈನ ಧರ್ಮದ ಅನುಯಾಯಿಯಾಗಿದ್ದರಿಂದ ಇದೊಂದು ಜೈನ ಕಾವ್ಯವಾಗಿದೆ. ಕ್ರಿ.ಪೂ. ಏಳನೇ ಶತಮಾನದಲ್ಲಿನ ಈ ಕಾವ್ಯವು ಹದಿಮೂರು ಅಧ್ಯಾಯಗಳೊಂದಿಗೆ 3145 ಹಾಡುಗಳಿಂದ ಕೂಡಿದೆ. ಈ ವರೆಗಿನ ತಮಿಳಿನ ಎರಡು ಮಾಹಾಕಾವ್ಯಗಳು ತಮಿಳು ಮಣ್ಣಿನ ಮಹಿಳೆಯನ್ನು ಪ್ರಧಾನ(ಕಥಾನಾಯಕಿ) ಪಾತ್ರವಾಗಿ ಚಿತ್ರಿಸಿದರೆ ಈ ಕಾವ್ಯ ಉತ್ತರ ಭಾರತದ ಶೈಲಿಯನ್ನು (ಪುರುಷನನ್ನು) ಪ್ರಧಾನವಾಗಿರಿಸಿಕೊಂಡಿದೆ. ಸಿಂದಾಮಣಿ ಎಂಬುದು ಕೇಳಿದ್ದನ್ನು ಕೊಡುವ ದೇವಲೋಕದಲ್ಲಿರುವ ಒಂದು ಬೆಲೆಬಾಳುವ ಮಣಿ. ಈ ಕಾವ್ಯವು ಸೀವಗ ಸಿಂದಾಮಣಿಯು ರಾಜನ ಚರಿತ್ರೆಯನ್ನು ತಿಳಿಸುತ್ತದೆ.

ಏಮಾಂಗದ ನಾಡಿನ ರಾಜಧಾನಿ ರಾಜಮಾಪುರ. ಈ ನಾಡಿನ ಅರಸ ಸಚ್ಚಂದನು ತನ್ನ ರಾಣಿ ವಿಸಯೈಳ ಮೇಲಿನ ಮೋಹದಿಂದ ಆಳ್ವಿಕೆ ನಡೆಸುವುದರಲ್ಲಿ ಆಸಕ್ತಿ ತೋರದೆ, ಕಟ್ಟಿಯಂಗಾರನ್ ಎಂಬ ಮಂತ್ರಿಗೆ ರಾಜ್ಯವನ್ನು ಒಪ್ಪಿಸಿ ರಾಣಿಯ ಜೊತೆಗೆ ಅಂತಪುರದಲ್ಲಿಯೇ ಕಾಲ ಕಳೆಯುತ್ತಾನೆ. ಈ ಸಂದರ್ಭವನ್ನು ಬಳಸಿಕೊಂಡ ಕಟ್ಟಿಯಂಗಾರನ್‌ನು ಸಂಚು ಹೂಡಿ ರಾಜನ ಮೇಲೆ ಯುದ್ಧ ಸಾರುತ್ತಾನೆ. ಸಚ್ಚಂದನ ಗರ್ಭವತಿಯಾದ ವಿಸಯೈಯನ್ನು ಒಂದು ನವಿಲಿನ ಗಾಡಿ(ವಿಮಾನ)ದಲ್ಲಿ ಕಳುಹಿಸಿ, ಯುದ್ಧದಲ್ಲಿ ಮರಣ ಹೊಂದುತ್ತಾನೆ. ವಿಸಯೈ ನವಿಲಿನ ಗಾಡಿ ಚಲಾಯಿಸಲು ಬರದೆ ಅದು ಒಂದು ಸ್ಮಶಾನದಲ್ಲಿ ಇಳಿಯುತ್ತದೆ. ಅಲ್ಲಿಯೇ ವಿಸಯೈ ಸೀವಗನನ್ನು ಹಡೆಯುತ್ತಾಳೆ. ಎಲ್ಲವನ್ನು ಕಳೆದುಕೊಂಡೆ ಎಂದುಕೊಳ್ಳುವಾಗ ಸಿಂದಾಮಣಿ ಸಿಕ್ಕಂತೆ ಮಗು ಹುಟ್ಟಿದ್ದರಿಂದ ಮಗುವಿಗೆ ಸಿಂದಾಮಣಿ ಎಂದು ಹೆಸರಿಡುತ್ತಾಳೆ, ಬರಿಗೈಯಿಂದ ತನ್ನ ಮಗನನ್ನು ಹೇಗೆ ಬೆಳೆಸಬೇಕು ಎಂದುಕೊಂಡಾಗ ಕಂದುಕ್ಕಡನ್ ಎಂಬ ವ್ಯಾಪಾರಿ ಮಗುವನ್ನು ತೆಗೆದುಕೊಂಡು ಬೆಳೆಸುತ್ತಾನೆ. ಕಂದುಕ್ಕಡನ್‌ನು ಸಿಂದಾಮಣಿಯನ್ನು

ಎತ್ತಿಕೊಂಡಾಗ ಅಶರೀರ ವಾಣಿಯೊಂದು ಸೀವ ಎಂದು ಕೇಳಿಸುತ್ತದೆ, ಅದಕ್ಕೆ ಮಗುವಿಗೆ ಸಿವಗ ಸಿಂದಾಮಣಿ ಎಂದು ಹೆಸರಿಡಲಾಯಿತು.

ನಂತರ ಕಂದುಕ್ಕಡನ್‌ಗೆ ನಂದಟ್ಟನ್, ನಪುಲನ್, ವಿಪುಲನ್ ಎಂಬ ಮಕ್ಕಳು ಹುಟ್ಟುತ್ತಾರೆ. ಸೀವಗನು ತಮ್ಮಂದಿರೊಂದಿಗೆ ಸೇರಿ ಅಚ್ಚಣಂದಿ ಎಂಬ ಗುರುವಿನ ಬಳಿ ವಿದ್ಯೆ ಕಲಿಯುತ್ತಾನೆ. ಈ ಗುರುವು ಸೀವಗನ ಹುಟ್ಟಿನ ರಹಸ್ಯವನ್ನು ತಿಳಿಸಿ ಕಟ್ಟಿಯಂಗಾರನನ್ನು ಗೆಲ್ಲುವ ದಾರಿಯನ್ನು ತಿಳಿಸುತ್ತಾನೆ. ಕಟ್ಟಿಯಂಗಾರನ ಅರಮನೆಯ ಹಸುಗಳು ಬೇಡರು ತೆಗೆದುಕೊಂಡು ಹೋದಾಗ ಕಟ್ಟಿಯಂಗಾರನ ಸೈನಿಕರು ತಡೆಯಲಾಗದಿದ್ದಾಗ ಹಸುಗಳ ನಾಯಕ ನಂದಗೋಪನ್ ಹಸುಗಳನ್ನು ರಕ್ಷಿಸಿ ತರುವವರಿಗೆ ತನ್ನ ಮಗಳು ಗೋವಿಂದೈಯನ್ನು ಮದುವೆ ಮಾಡಿಸಿ ಕೊಡುವುದಾಗಿ ತಿಳಿಸುತ್ತಾನೆ. ಸೀವಗನು ಹಸುಗಳನ್ನು ರಕ್ಷಿಸಿ ಗೋವಿಂದೈಯನ್ನು ತನ್ನ ಸ್ನೇಹಿತ ಪದುಮುಖನಿಗೆ ಮದುವೆ ಮಾಡಿಸುತ್ತಾನೆ.

ಕಾಂದರುವತತ್ತೈ, ಗುಣಮಾಲೈ, ಪದುಮೈ, ಕೇಮಸರಿ, ಕನಗಮಾಲೈ, ವಿಮಲೈ, ಸುರಮಂಜರಿ ಮತ್ತು ಇಲಕ್ಕನೈ ಎಂಬ ಎಂಟು ಸ್ತ್ರೀಯರನ್ನು ಸೀವಗನು ಮದುವೆ ಆಗುತ್ತಾನೆ. ಇದರಿಂದ ಎಂಟು ಗಂಡುಮಕ್ಕಳನ್ನು ಪಡೆಯುತ್ತಾನೆ. ಜೀವನದ ಸುಖಭೋಗಗಳನ್ನು ಅನುಭವಿಸಿ ನಂತರ ತನ್ನ ಹಿರಿಯ ಮಗ ಸಚ್ಚಂದನಿಗೆ ಪಟ್ಟಾಭಿಷೇಕ ಮಾಡಿಸಿ ತನ್ನ ಮಡದಿಯರೊಂದಿಗೆ ದೀಕ್ಷೆ ಪಡೆಯುತ್ತಾನೆ.

**ಕುಂಡಲಕೇಶಿ**

ಕುಂಡಲಕೇಶಿಯು ಒಂದು ಬೌದ್ಧ ಧರ್ಮದ ಕೃತಿ. ಕುಂಡಲಕೇಶಿ ಎಂದರೆ ಗುಂಗುರು ಕೂದಲು ಅಂದರೆ ಕಾವ್ಯದ ನಾಯಕಿ ಗುಂಗುರು ಕೂದಲು ಹೊಂದಿದ್ದರಿಂದ ಕುಂಡಲಕೇಶಿ ಎಂಬ ಹೆಸರು ಪಡೆಯುತ್ತಾಳೆ. ಸಂಪೂರ್ಣವಾಗಿ ಲಭ್ಯವಿರದ ಈ ಕಾವ್ಯ 14ನೇ ಶತಮಾನದಲ್ಲಿ ಪ್ರಚಲಿತದಲ್ಲಿದ್ದು ನಂತರ ನಾಶವಾಗಿರಬಹುದೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ನಾದಕುತ್ತನಾರ್ ಎಂಬುವವರು ಕುಂಡಲಕೇಶಿ ಕಾವ್ಯವನ್ನು ಬರೆದವರು ಎಂದು ನೀಲಕೇಶಿ ಕೃತಿ ತಿಳಿಸುತ್ತದೆ. 19 ಹಾಡುಗಳು ಮಾತ್ರ ಲಭ್ಯವಾಗಿವೆ.

ರಾಜಗೃಹ ಎಂಬ ನಗರದ ರಾಜನಿಗೆ ಮಂತ್ರಿ ಒಬ್ಬನಿದ್ದ. ಆ ಮಂತ್ರಿಗೆ ಬದ್ರ ಎಂಬ ಮಗಳಿದ್ದಳು. ಅವಳು ಮಾಳಿಗೆಯಲ್ಲಿ ಗೆಳತಿಯರೊಂದಿಗೆ ಚಂಡಿನಾಟವಾಡುತ್ತಿದ್ದಾಗ ಚಂಡು ಎಸೆಯುವಾಗ ಅದು ಕೆಳಗೆ ಒಬ್ಬ ಯುವಕನಾದ ಕಾಳನ್ ಮೇಲೆ ಬೀಳುತ್ತದೆ. ಅವಳು ಚೆಂಡನ್ನು ಕೆಳಗೆ ನೋಡುವಾಗ ಕಾಳನ್ ಮೇಲೆ ನೋಡುತ್ತಾನೆ. ಇಬ್ಬರ ನೋಟಗಳು ಸೇರಿ ಪ್ರೀತಿ ಬೆಳೆಯುತ್ತದೆ. ಕಾಳನ್ ಕಳ್ಳತನದ ಶಿಕ್ಷೆಗೆ ಒಳಗಾಗಿದ್ದ ವ್ಯಕ್ತಿ ಆದರೂ ಬದ್ರೆ ಅವನನ್ನೇ ಮದುವೆ ಆಗುವ ಹಟ ಹಿಡಿಯುತ್ತಾಳೆ. ಮಗಳ ಆಸೆ ತಿಳಿದ ಮಂತ್ರಿ ರಾಜನ ಬಳಿ ವಿಚಾರ ತಿಳಿಸಿ ಕಳ್ಳನಿಗೆ ಬಿಡುಗಡೆಗೊಳಿಸಿ ಮಗಳಿಗೆ ಕೊಟ್ಟು ಮದುವೆ ಮಾಡಿಸುತ್ತಾನೆ. ಕಳ್ಳನು ಒಳ್ಳೆಯವನಾಗಿ ಬದಲಾಗುತ್ತಾನೆ. ಹೀಗಿದ್ದಾಗ ಒಮ್ಮೆ ಆಟವಾಡಿಸಲು ಕಾಳನ್ ಅವಳ ಕುಂಕುಮದ ಬರಣಿಯನ್ನು ಬಚ್ಚಿಡುತ್ತಾನೆ. ಅವಳು ಹುಡುಕಿದರೂ ಸಿಗುವುದಿಲ್ಲ ಕೊನೆಗೆ ಅವನೇ ತಂದು ಕೊಡುತ್ತಾನೆ. ಅದಕ್ಕೆ ತಮಾಷೆಯಾಗಿ ಬದ್ರೆಯು ಕಾಳನ್‌ಗೆ ನೀನು ಕಳ್ಳನಲ್ಲವೆ ನಿನ್ನ ಮಾಯೆಗಳನ್ನೆಲ್ಲಾ ನಾನು ಬಲ್ಲೆ ಎಂದು ಹೇಳುತ್ತಾಳೆ. ಆದರೆ ಅದು ಅವನ ಮನಸ್ಸಿನಲ್ಲಿ ಹಿಂದಿನ ಜೀವನವನ್ನು ಕೊರೆಯುವಂತೆ ಮಾಡುತ್ತದೆ.

ಈ ವಿಷಯವನ್ನು ಮನಸ್ಸಿನಲ್ಲೇ ಇಟ್ಟುಕೊಂಡ ಕಾಳನ್ ಅವಳನ್ನು ಸಾಯಿಸಲು ಸಂಚು ಹೂಡುತ್ತಾನೆ. ಅದಕ್ಕೆ ಬೆಟ್ಟದ ಮೇಲಿರುವ ದೇವರನ್ನು ಪೂಜಿಸಿ ಬರೋಣ ಎಂದು ಹೇಳಿದಾಗ ಬದ್ರೆಯು ಸರಿ ಎಂದು ಹೊರಡುತ್ತಾಳೆ. ಬೆಟ್ಟದ ಮೇಲೆ ಹೋದ ನಂತರ ಅವನು ಅಂದು (ನಾಳಿಗೆಯಲ್ಲಿ ಹಿಡಿತವಿಲ್ಲದೆ) ನನ್ನನ್ನು ಕಳ್ಳ ಎಂದೆ ಅಲ್ಲವೇ, ಇಂದು ನಿನ್ನನ್ನು ಕೊಲ್ಲುತ್ತೇನೆ ಸಾಯುವ ಮುನ್ನ ನಿನ್ನ ಮನೆದೇವರನ್ನು ಬೇಡಿಕೋ ಎಂದು ಹೇಳುತ್ತಾನೆ. ಇದನ್ನು ತಿಳಿದ ಬದ್ರೆ ಕಕ್ಕಾಬಿಕ್ಕಿಯಾಗುತ್ತಾಳೆ. ನಂತರ ಗಂಡನೇ ಕಣ್ಣಿಗೆ ಕಂಡ ದೇವರು ನಿಮ್ಮನ್ನು ಒಮ್ಮೆ ಸುತ್ತಿ ಮುಗಿದ ಮೇಲೆ ನನ್ನನ್ನು ಸಾಯಿಸಿ ನಿಮ್ಮ ಕೈಯಲ್ಲಿ ನನ್ನ ಜೀವ ಹೋಗುವುದು ನಾನು ಮಾಡಿದ ಮಹಾ ಪುಣ್ಯ ಎಂದು ಗಂಡನ ಬಳಿ ಕೇಳಿದಾಗ ಅವನು ಸರಿ ಎನ್ನುತ್ತಾನೆ. ಅವನನ್ನು ಸುತ್ತುವಂತೆ ಸುತ್ತಿ ಬರುವಾಗ ಹಿಂದಿನಿಂದ ತಳ್ಳಿ ಕೊಲ್ಲುತ್ತಾಳೆ. ತನ್ನನ್ನು ಸಾಯಿಸಲು ಬಂದ ಗಂಡನನ್ನು ಸಾಯಿಸಿ, ತಾನೂ ಸಾಯಲು ಸಿದ್ದಳಾಗುತ್ತಾಳೆ. ಬೆಟ್ಟದಿಂದ ಬಿದ್ದು ಸಾಯಲು ಹೋದ ಅವಳನ್ನು ಒಬ್ಬ ಹೆಂಗಸು ತಡೆಯುತ್ತಾಳೆ.

ನಂತರ ಜೈನ ಮತದ ದೀಕ್ಷೆ ಪಡೆಯುತ್ತಾಳೆ. ಆ ಜೈನ ಮಠದಲ್ಲಿ ಜೈನ ಧರ್ಮದ ಉದ್ದೇಶಗಳ ಜೊತೆಗೆ ಬೇರೆ ಧರ್ಮದ ವಿಚಾರಗಳನ್ನು ತಿಳಿದುಕೊಳ್ಳಲು ಪ್ರಯತ್ನಿಸುತ್ತಾಳೆ. ಒಂದು ದಿನ ಬೌದ್ಧರ ಶಿಷ್ಯ ಸಾರಿ ಬುದ್ಧರೊಂದಿಗೆ ಧರ್ಮ ವಾದಕ್ಕೆ ನಿಲ್ಲುತ್ತಾಳೆ. ಅವರ ಬಳಿ ಸೋತು ಅವರ ಸಲಹೆಯಿಂದ ಭಗವಾನ್ ಬುದ್ದರ ಸಮ್ಮುಖದಲ್ಲಿ ಬೌದ್ಧ ಧರ್ಮದ ಭಿಕ್ಷು ಆಗುತ್ತಾಳೆ. ಬದ್ರೆಯು ಜೈನ ಧರ್ಮದಲ್ಲಿದ್ದಾಗ ಅವಳ ತಲೆಯ ಕೂದಲು ಮುಂಡನ ಮಾಡಿದರೂ ಅದು ಮತ್ತೆ ಮತ್ತೆ ಸುರುಳಿಯಾಗಿ ಬೆಳೆಯುತ್ತಿತ್ತು. ಅದರಿಂದ ಬದ್ರೆಗೆ ಕುಂಡಲಕೇಶಿ ಎಂಬ ಹೆಸರು ಬಂದಿತು.

**ವಲೈಯಾಪತಿ**

ಇದೊಂದು ಜೈನ ಧರ್ಮದ ಕಾವ್ಯ. ಇದು ಸಹ ಕುಂಡಲಕೇಶಿಯಂತೆ ಪೂರ್ಣ ಲಭ್ಯವಿರದ ಕಾವ್ಯ. ಇದರ ಕರ್ತೃ ಯಾರು, ಕಥಾನಾಯಕ ಯಾರು, ಕಾವ್ಯದ ಕತೆ ಏನು ಎಂಬುದು ಯಾವುದು ಆಧಾರ ಪೂರ್ಣವಾಗಿ ತಿಳಿದು ಬಂದಿಲ್ಲ. 'ಪುರತ್ತಿರಟ್ಟುತ್ ತೊಗೈ' ಎಂಬ ಕೃತಿಯಲ್ಲಿ ವಲೈಯಾಪತಿಯ 66 ಹಾಡುಗಳು ಸಿಗುತ್ತದೆ. ಒಟ್ಟು ಈ ಕಾವ್ಯದ 72 ಹಾಡುಗಳು ಮಾತ್ರ ಸಿಕ್ಕಿವೆ. ಆದರು ಸಿಕ್ಕ ಹಾಡುಗಳಿಂದ ಪೂರ್ಣವಾಗಿ ಕತೆಯನ್ನು ತಿಳಿಯಲು ಆಗುವುದಿಲ್ಲ. ವಲೈಯಾಪತಿ ಕತೆಯು ವೈಷ್ಣವ ಪುರಾಣ 35ನೇ ಅಧ್ಯಾಯದಲ್ಲಿ ಕಾಣಿಸುತ್ತದೆ. ನವಕೋಟಿ ನಾರಾಯಣ ಒಬ್ಬ ವಜ್ರ ವ್ಯಾಪಾರಿ. ಅವನು ತನ್ನ ಕುಲದಲ್ಲಿ ಒಂದು ಹೆಣ್ಣನ್ನು ಬೇರೆ ಕುಲದಲ್ಲಿ ಒಂದು ಹೆಣ್ಣನ್ನು ಮದುವೆ ಮಾಡಿಕೊಂಡಿದ್ದರಿಂದ ಅವನನ್ನು ಕುಲದಿಂದ ದೂರವಿಡಲಾಗಿತ್ತು. ಇದರಿಂದ ದುಃಖಿತನಾದ ನಾರಾಯಣ ಬೇರೆ ಕುಲದ ಹೆಣ್ಣನ್ನು ದೂರವಿಡುತ್ತಾನೆ. ಅವಳು ತನಗೆ ಜೀವನ ನೀಡುವಂತೆ ಕಾಳಿ ದೇವತೆಯನ್ನು ಬೇಡುತ್ತಾಳೆ. ಕಾಳಿಯ ಕೃಪೆಯಿಂದ ಅವಳಿಗೆ ಒಂದು ಗಂಡು ಮಗು ಜನಿಸುತ್ತದೆ. ಆ ಮಗು ಬೆಳೆದು ದೊಡ್ಡವನಾಗಿ ಪುಗಾರ್ ನಗರದ ವ್ಯಾಪಾರಿಗಳ ಬಳಿ ತನ್ನ ತಂದೆ ನವಕೋಟಿ ನಾರಾಯಣ ಎಂದು ನಿರೂಪಿಸುತ್ತಾನೆ. ಕಾಳಿ ದೇವಿಯು ಪ್ರತ್ಯಕ್ಷಳಾಗಿ ಸತ್ಯವನ್ನು ತಿಳಿಸುತ್ತದೆ. ವ್ಯಾಪಾರಿಗಳು ಅವನನ್ನು ನವಕೋಟಿ ನಾರಾಯಣನ ಮಗನೇ ಎಂದು ನಂಬುತ್ತಾರೆ. ನಂತರ ಕುಟುಂಬದವರು ಎಲ್ಲರು ಸೇರಿ ಒಂದಾಗಿ ಸಂತೋಷವಾಗಿ ಜೀವಿಸುತ್ತಾರೆ. ಇದು ವಲೈಯಾಪತಿಯ ಮೂಲ ಚರಿತ್ರೆಯಾಗಿದೆ.

**ಉಪಸಂಹಾರ**

ಭಾಷೆಯ ಒಂದು ಸಮುದಾಯದ ಸಂಸ್ಕೃತಿಯ ಸಂಕೇತವಾಗಿದೆ. ಮನುಷ್ಯರ ಮನಸ್ಸಿನ ಭಾವನೆಗಳನ್ನು ಭಾಷೆಯ ಮೂಲಕವೇ ವ್ಯಕ್ತಪಡಿಸುತ್ತಾನೆ. ಅಂತಹ ಭಾಷೆ ನಾಶವಾದರೆ ಒಂದು ಸಂಸ್ಕೃತಿಯೇ ನಾಶವಾದಂತೆ. ಆದ್ದರಿಂದ ಆ ಭಾಷೆಯನ್ನು ಉಳಿಸಿಕೊಳ್ಳುವುದು ಆ ಭಾಷೆ ಆಡುವವರ ಕರ್ತವ್ಯವಾಗಿದೆ. ಅದರೊಂದಿಗೆ ಆ ಭಾಷೆಯನ್ನು ದೀರ್ಘ ಕಾಲ ಉಳಿಸಿಕೊಂಡು ಬರುವಲ್ಲಿ ಸಾಹಿತ್ಯವು ಪ್ರಮುಖವಾದ ಪಾತ್ರವಹಿಸುತ್ತದೆ. ಆ ನಿಟ್ಟಿನಲ್ಲಿ ತಮಿಳು ಭಾಷೆಯನ್ನು ಶ್ರೀಮಂತಗೊಳಿಸಿರುವುದು ಸಂಗಂ ಸಾಹಿತ್ಯ ಮತ್ತು ಮಹಾಕಾವ್ಯಗಳು. ಪ್ರಸ್ತುತ ಲೇಖನದಲ್ಲಿ ತಮಿಳನಲ್ಲಿರುವ ಐದು ಮಹಾಕಾವ್ಯಗಳ ವಸ್ತು, ವಿಷಯ, ಕಾಲ ಮತ್ತು ಲೇಖಕರನ್ನು ಪರಿಚಯಿಸಲಾಗಿದೆ. ಒಟ್ಟಾರೆ ಈ ಐದು ಮಹಾಕಾವ್ಯಗಳು ಆಗಿನ ಸಂದರ್ಭದಲ್ಲಿ ಧರ್ಮ ಪ್ರಚಾರ ಮಾಡುವುದು ಬಹುಮುಖ್ಯ ಕಾರಣವಾಗಿರುವುದನ್ನು ಗಮನಿಸಬಹುದು. ಸಿಲಪ್ಪಾದಿಗಾರಂ, ಮಣಿಮೇಗಲೈ, ಸೀವಗ ಸಿಂದಾಮಣಿ ಕಾವ್ಯಗಳು ಪೂರ್ಣವಾಗಿ ಲಭ್ಯವಾದರೂ ವಲೈಯಾಪತಿ ಮತ್ತು ಕುಂಡಲಕೇಶಿ ಕಾವ್ಯಗಳು ಅಪೂರ್ಣವಾಗಿ ಲಭ್ಯವಾಗಿರುವುದು ಸಣ್ಣ ಪ್ರಮಾಣದ ಕೊರತೆ ಎಂದರೆ ತಪ್ಪಾಗಲಾರದು.

**ಪರಾಮರ್ಶನ ಗ್ರಂಥಗಳು**


- ದುರೈಸಾಮಿಪ್ ಪಿಳ್ಳೈ. ಸು. (1941). ಸಿವಗ ಸಿದ್ದಾಂತಮಣಿ–ಸುರುಕ್ಕಂ ಉರೈ ಕುರಿಪ್ಪುಗಳುಡನ್. ದಕ್ಷಿಣ ಭಾರತ ಶೈವ ಸಿದ್ದಾಂತ ಪ್ರಕಾಶನ ಚೆನ್ನೈ.
- ಇಳವರಸನ್ ಸೋಮ. (1987). ಕಾಪ್ಪಿಯತ್ತಿರನ್. ಮಣಿವಾಸಗರ್ ಪ್ರಕಾಶನ, ಚೆನ್ನೈ.
- ಕಾಶಿರಾಜನ್ ಆರ್. (2008). ಕಾಪ್ಪಿಯತ್ ತೋಟ್ರಮುಂ ವಳರ್ಚ್ಚಿಯುಂ. ಮದಿ ಪ್ರಕಾಶನ, ಮಧುರೈ.
- ನಾರಾಯಣ ಪಿಳ್ಳೈ. ಎಂ. (2017). ಉರೈನಡೈತ್ ತಮಿಳಿಲ್ ಐಂಪೆರುಂ ಕಾಪ್ಪಿಯಂಗಳ್. ನರ್ಮದಾ ಪ್ರಕಾಶನ. ಚೆನ್ನೈ.
- ರಾಮ.ಮಳರ್‌ವಿಳಿಮಂಗೈಯರ್ಕ್ಕರಸಿ. (2007). ತಿರುತ್ತಕ್ಕ ದೇವರಿನ್ ವಳೈಯಾಪತಿ. ಪಾವೈ ಪಬ್ಲಿಕೇಶನ್. ಚೆನ್ನೈ.
- ಸಾಮಿ. ಸಿದಂಬರನ್. (1973). ಸಿಲಪ್ಪಾದಿಗಾರಲ್ ತಮಿಳಗಂ. ಚೆನ್ನೈ ಪ್ರಕಾಶನ. ಚೆನ್ನೈ.
- ಸೀನಿಚ್ಚಾಮಿ ದು. (1985). ತಮಿಳಿಳ್ ಕಾಪ್ಪಿಯಕ್ ಕೊಳ್‌ಗೈ. ತಮಿಳ್ ವಿಶ್ವವಿಧ್ಯಾಲಯ ಪ್ರಕಾಶನ, ತಂಜಾವೂರ್.
- ಸೋಮಸುಂದರನಾರ್. (1978). ಕುಂಡಲಕೇಶಿ. ದಕ್ಷಿಣ ಭಾರತ ಶೈವ ಸಿದ್ದಾಂತ ಪ್ರಕಾಶನ, ಚೆನ್ನೈ.
- ತವತ್ತಿರು ಕುಂಡ್ರಕ್ಕುಡಿ ಅಡಿಗಲಾರ್. (1993). ಸಿಲಂಬು ನೆರಿ. ಕಲೈವಾಣಿ ಪುಸ್ತಕಾಲಯ., ಚೆನ್ನೈ. ತಿರುಕೂಡ ಸುಂದರಂ. (1967). ಸಿಲಪ್ಪಾದಿಗಾರಂ. ಅನ್ನಾಮಲೈ ವಿಶ್ವವಿದ್ಯಾಲಯ ಪ್ರಕಾಶನ, ಚೆನ್ನೈ.
- ವೆಂಕಟಸಾಮಿ ನಾಟ್ಟರ್. ನ.ಮು. (2007) ಮಣಿಮೇಗಲೈ ಮೂಲಮುಂ ಉರೃಯುಂ. ಶಾರದ ಪ್ರಕಾಶನ, ಚೆನ್ನೈ.